**OS No.324/2007**
**DW.2**

<u>ದಿನಾಂಕಃ **08.11.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದ</u>

ನನ್ನ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ ಮತ್ತು ಪ್ರಮಾಣಪತ್ರದಲ್ಲಿರುವ ಅಂಶಗಳನ್ನು ತಿಳಿದುಕೊಂಡಿರುತ್ತೇನೆ. ಸಾಕ್ಷಿ ಹೇಳಲು ಪ್ರತಿವಾದಿ-6 ರವರು ಕರೆದುಕೊಂಡು ಬಂದಿರುತ್ತಾರೆ. ವಾದಿ ಪ್ರತಿವಾದಿಗಳ ಮೇಲೆ ಸದರಿ ದಾವೆಯನ್ನು ಸಲ್ಲಿಸಿರುತ್ತಾರೆ. ನನ್ನ ಪ್ರಮಾಣ ಪತ್ರಲ್ಲಿ ವಿಭಾಗ ಆಗಿರುತ್ತದೆ ಎಂದು ಹೇಳಿರುತ್ತೇನೆ ಆದರೆ ದಿನಾಂಕ ನೆನಪಿಲ್ಲ. ಸುಮಾರು 30 ವರ್ಷಗಳು ಆಗಿರುತ್ತದೆ. ಪ್ರತಿವಾದಿಗಳು ನನ್ನ ಸಂಬಧಿಕರಲ್ಲ. ವಿಭಾಗ ಮಾಡುವ ಸಮಯದಲ್ಲಿ ಯಾರು ಇದ್ದರು ಎಂದು ನೆನಪಿಲ್ಲ. ವಾದಿ ತಂದೆಗೆ 8 ಜನ ಮಕ್ಕಳು. ಅವರುಗಳೆಂದರೆ ದೊಡ್ಡಅಕ್ಕಯಮ್ಮ, ಆಂಜಿನಮ್ಮ, ಮುನಿಆಂಜಿನಪ್ಪ, ಗುಂಡ್ಲಪ್ಪ, ಎಲ್ಲಪ್ಪ, ಮುನಿಯಪ್ಪ, ಮತ್ತು ಚಿಕ್ಕಮುನಿಯಪ್ಪ. ಯಾವ ಯಾವ ಸ್ವತ್ತುಗಳನ್ನು ಭಾಗ ಮಾಡಿಕೊಂಡರು ಎಂದರೆ 2 ಸ್ವತ್ತುಗಳು ಆದರೆ ಸ್ವತ್ತಿನ ನಂಬರ್ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ವಿಭಾಗದಲ್ಲಿ ಹೆಣ್ಣು ಮಕ್ಕಳಿಗೆ ಭಾಗ ಕೊಟ್ಟಿರುವುದಿಲ್ಲ ಆದರೆ ಎತ್ತು, ದನ, ಕರು, ಒಡವೆ ಕೊಟ್ಟಿರುತ್ತಾರೆ.

ದೊಡ್ಡಅಕ್ಕಯಮ್ಮ ಮತ್ತು ಆಂಜಿನಮ್ಮ ಹಾಜರಿದ್ದರು. ಆ ಸಮಯದದಿಲ್ಲಿ ಒಂದನೇ ವಾದಿಗೆ ಮತ್ತು 2 ನೇ ವಾದಿಗೆ ಸುಮಾರು 25 ಮತ್ತು 30 ವರ್ಷ ವಯಸ್ಸಾಗಿತ್ತು. ಸದರಿ ಸಮಯದಲ್ಲಿ ಒಂದನೇ ವಾದಿ ಮೈನರ್ ಆಗಿದ್ದು 2 ನೇ ವಾದಿ ಹುಟ್ಟಿರಲಿಲ್ಲ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ ಮದುವೆಯಾಗಿತ್ತು ಎಂದು ನುಡಿಯುತ್ತಾರೆ. ಯಾರಿಗೆ ಎಷ್ಟು ದನ, ಕರು ಮತ್ತು ಒಡವೆ ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ವಾದಿಗಳಿಗೆ ಯಾವುದೇ ಭಾಗ ಕೊಟ್ಟಿರದಿದ್ದರೂ ಸಹ ಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ-6 ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

**(ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
ದೊಡ್ಡಬಳ್ಳಾಪುರ .